# ನೀರೆಲ್ಲವೂ ತೀರ್ಥ

ಕನ್ನಡ ಜನಪದ ಗೀತೆಯೊಂದು ಹೇಳುವ ಅತ್ಯಂತ ಪ್ರೌಢ ಮತ್ತು ಆರ್ದ್ರ ವಿವೇಕ ಹೀಗಿದೆ: 'ಕಾಶೀಗಿ ಹೋಗಲಕ ಏಸೊಂದು ದಿನ ಬೇಕ/ ತಾಸೊತ್ತಿನ ಹಾದಿ ತವರೂರ| ಮನೆಯಾಗ/ ಕಾಶಿ ಕುಂತಾಳ ಹಡೆದವ್ವ' ಪುಣ್ಯಕ್ಷೇತ್ರದ ದರ್ಶನದಿಂದ ಬರುವ ಎಲ್ಲ ಲೌಕಿಕ ಭಾಗ್ಯಗಳನ್ನೂ ತನ್ನ ತವರಿನಲ್ಲಿರುವ ತಾಯಿಯ ಸಾನ್ನಿಧ್ಯದಲ್ಲೇ ಕಂಡುಕೊಂಡ ಅವಿದ್ಯಾವಂತ ಮುಗ್ಧ ಹೆಣ್ಣುಮಗಳೊಬ್ಬಳು ಹೇಳುವ ಮಾತು ಎಲ್ಲ ಕಾಲಕ್ಕೂ ಪ್ರಸ್ತುತವೇ. ಇದಕ್ಕೆಂದೇ ನಮ್ಮ ಜನಪದರೆಲ್ಲಾ ರಾಮಾಯಣ ಮತ್ತು ಮಹಾಭಾರತದ ಕತೆಗಳನ್ನೆಲ್ಲಾ ತಮ್ಮ ತಮ್ಮ ಹಳ್ಳಿಗಳಲ್ಲೇ ಮರುಸೃಷ್ಟಿಸಿಕೊಂಡರು ಅಥವಾ ಸ್ಥಳೀಕರಿಸಿಕೊಂಡರು. ಜನತೆಯ ಮನಸ್ಸು ಮತ್ತು ಬದುಕು ಯಾವಾಗಲೂ ನದಿ ಕೆರೆ ಕಟ್ಟೆಗಳ ಸಂಗಡ ಬೆರೆತಿರುತ್ತದೆ. ಇದು ಭಾರತದ ವೈಶಿಷ್ಟ್ಯ.

ನೀವು ಯಾವುದೇ ಊರಿಗೆ ಹೋದರೂ ಅಲ್ಲಿ ರಾಮಾಯಣಕ್ಕೊ ಅಥವಾ ಮಹಾಭಾರತಕ್ಕೊ ಸಂಬಂಧಿಸಿದ ಘಟನೆಯನ್ನೊ ಅಥವಾ ಸ್ಥಳವನ್ನೊ ತೋರಿಸುವ ನೂರಾರು ಹಳ್ಳಿಗಳು ಇಂದಿಗೂ ನಮ್ಮಲ್ಲಿವೆ. ಜಟ್ಟಂಗಿ ರಾಮೇಶ್ವರ ಬೆಟ್ಟದಲ್ಲಿ, ಜಟಾಯು ಇದೇ ಬೆಟ್ಟದಲ್ಲಿಯೇ ರಾವಣನೊಂದಿಗೆ ಕಾದಾಡಿ ಮಡಿಯಿತು ಎನ್ನುವುದನ್ನು ಐತಿಹ್ಯವಾಗಿ ಹೇಳುವ ಸ್ಥಳಗಳಿವೆ. ಹಾಗೆಯೇ ದೊಣೆಯೊಂದರ ಬಂಡೆಯ ಮೇಲೆ ಕಾಣುವ ಉದ್ದನೆಯ ನೆರಳನ್ನು ತೋರಿಸಿ ಇದೇ ಸ್ಥಳದಲ್ಲಿ ರಾವಣ ಸೀತೆಯನ್ನು ಅಪಹರಿಸುವಾಗ ಜಾರಿದ ಸೀತೆಯ ಸೆರಗಿನ ಗುರುತು ಇದು ಎಂದು ಹೇಳುತ್ತಾರೆ. 'ನಾಮದ ಚಿಲುಮೆ' ಸ್ಥಳದಲ್ಲೇ ಶ್ರೀರಾಮ ನಾಮ ಇಟ್ಟುಕೊಳ್ಳಲು ಚಿಲುಮೆ ತೋಡಿದ್ದು ಎಂದು ಸದಾ ಕಾಲವೂ ನೀರು ತುಂಬಿ ಹರಿಯುವ ಒರತೆಯನ್ನು ತೋರಿಸುತ್ತಾರೆ. ಹಾಗೆಯೇ ಕುಂತಿ ಅಡುಗೆ ಮಾಡಿದ ಸ್ಥಳ, ಭೀಮ ಏರಿದ ಗುಟ್ಟೆ, ಹೀಗೆ ರಾಮಾಯಣ ಮತ್ತು ಮಹಾಭಾರತಗಳನ್ನು ಸ್ಥಳೀಕರಿಸಿಕೊಂಡ ನೂರಾರು ಸ್ಥಳಗಳು ನಮ್ಮ ನಡುವೆ ಇವೆ. ಇವೆಲ್ಲ ಕುರುಹುಗಳೂ ಹೇಳುವುದು ಒಂದೇ ಸಂಗತಿಯನ್ನು; ಏನೆಂದರೆ, ಪುರಾಣದ ಘಟನೆಗಳಿಗೆ ಒಂದು ನಿರ್ದಿಷ್ಟ ಕೇಂದ್ರವಿಲ್ಲ ಎಂಬುದನ್ನು. ಅವು ನಮ್ಮ ಊರಿನಲ್ಲೂ, ಕಲ್ಪನೆಯಲ್ಲೂ ನಡೆಯಬಹುದು! ಇವೆಲ್ಲ ಜನತೆ ಮಾಡಿಕೊಂಡ ವಿಕೇಂದ್ರೀಕರಣದ ಕುರುಹುಗಳು.

ಈ ಕುರುಹುಗಳು ಹೆಚ್ಚಾಗಿ ಪ್ರಕಟಗೊಳ್ಳುವುದು ಜನಪದರ ಮೌಖಿಕ ಪಠ್ಯಗಳಲ್ಲಿ ಹಾಗೂ ಅನುಭಾವಿಗಳು ಮತ್ತು ಸಂತರ ನಡವಳಿಕೆಯಲ್ಲಿ. 'ಮನಸ್ಸು ಮಥುರಾ, ಹೃದಯ ದ್ವಾರಕಾ, ಕಾಯ ಕಾಶಿ ಎಂದು ತಿಳಿ, ಹತ್ತು ದ್ವಾರಗಳ ದೇಹದಲ್ಲಿ ಜ್ಯೋತಿಯನ್ನು ಕಾಣು' ಎಂದು ಕಬೀರ ಹೇಳುತ್ತಾನೆ. ಇದರ ಜೊತೆಗೆ ತೋರಾಣಿಕೆಯ ಭಕ್ತಿಯನ್ನು ಕಟುವಾಗಿ ವಿರೋಧಿಸುವ ಈ ಸಿದ್ಧ ಪಂಥಗಳು ಢಾಂಬಿಕ ಭಕ್ತರನ್ನು ಕರುಣೆಯಿಲ್ಲದೆ ಗೇಲಿ ಮಾಡುತ್ತವೆ. ಕವಿ ವೇಮನ 'ನಾಯಿಯ ಏಕಾಂಗಿತನ, ಬಕಪಕ್ಷಿಯ ಧ್ಯಾನ, ಗಾರ್ದಭ ಪಠಣ, ಕಪ್ಪೆಯ ಸ್ನಾನ, ಶರೀರವನ್ನು ಬೂದಿಯಿಂದ ಬಳಿದುಕೊಂಡ ನೀನು ಹೇಗೆ ತಾನೆ ಉತ್ತಮ! ಹೆಂಡ ತುಂಬಿದ ಮಡಕೆಯನ್ನು ಬಿಳಿ ಬೂದಿಯಿಂದ ಲೇಪನ ಮಾಡಿದರೆ, ಅದು ತನ್ನ ವಾಸನೆಯನ್ನು ಕಳೆದುಕೊಳ್ಳಬಲ್ಲದೆ?' ಎಂದು ಪ್ರಶ್ನಿಸಿದ. ಲೌಕಿಕವನ್ನು ಮರುಳುಮಾಡುವ ಚಮತ್ಕಾರಗಳು, ಮೋಡಿಗಳು ಕೇವಲ ನವಿಲು ಗರಿಗಳಂತೆ! ನಿಜವಾದ ಆಧ್ಯಾತ್ಮಿಕ ಅನ್ವೇಷಣೆಗೆ ಇವೆಲ್ಲಾ ಸದಾ ಮಾರಕಗಳು ಎಂದು ಅನುಭಾವಿ ರೂಮಿ ಹೇಳಿದ. ಇದನ್ನೇ ನಮ್ಮ ವಚನಕಾರರು 'ನೀರ ಕಂಡಲ್ಲಿ ಮುಳುಗುವರಯ್ಯಾ / ಮರನ ಕಂಡಲ್ಲಿ ಸುತ್ತುವರಯ್ಯಾ / ಬತ್ತುವ ಜಲವ ಒಣಗುವ ಮರನ / ಮೆಚ್ಚಿದವರು ನಿಮ್ಮನೆತ್ತ ಬಲ್ಲರು' (ಬಸವಣ್ಣ) ಎಂದು ವ್ಯಂಗ್ಯವಾಡಿದರು.

ಅಧಿಕಾರ ಮತ್ತು ಹಣದ ಥೈಲಿಗಳು ನದಿಗಳ ಸ್ವಚ್ಛತೆಯನ್ನು ಕುರಿತ ನಮ್ಮ ಕಾಳಜಿಯನ್ನು ಬದಿಗೆ ಸರಿಸಿ ನಿರರ್ಥಕ ವಾದಗಳಲ್ಲಿ ತೊಡಗಿಸಿವೆ. ತಂತ್ರಜ್ಞಾನ ಮತ್ತು ಅಜ್ಞಾನದ ಫಲಗಳಿವು. 'ಗಂಗೆ ಮಾತ್ರ ಪವಿತ್ರವೆ, ನಮ್ಮ ತುಂಗೆ ಪವಿತ್ರವಲ್ಲವೆ' ಎಂದು ಕುವೆಂಪು ಹೇಳಿದ ಈ ಮಾತುಗಳು ಮೌಢ್ಯವೇ ತುಂಬಿ ತುಳುಕುವ ಈ ಸಮಾಜಕ್ಕೆ ಎಲ್ಲ ಕಾಲಕ್ಕೂ ಪ್ರಸ್ತುತವೆ. ಎಲ್ಲೋ ಇರುವ ಗುಡಿಗುಂಡಾರಗಳನ್ನು ಸುತ್ತುವ ಬದಲು ತನ್ನ ದೇಹವನ್ನೇ ಪವಿತ್ರವಾದ ದೇವಾಲಯವನ್ನಾಗಿ ಮಾಡಿಕೊಳ್ಳುವುದೇ ನಿಜವಾದ ಆಧ್ಯಾತ್ಮಿಕ ಸಾಧನೆ ಎಂದು ಸಂತರು ಹೇಳುತ್ತಾರೆ 'ತನುವೇ ಪಂಪಾಕ್ಷೇತ್ರ / ಮನವೇ ದೇವಸ್ಥಾನ / ಮಿಸುಪ ಜೀವನೆ ವಿರೂಪಾಕ್ಷ' (ಸರ್ಪಭೂಷಣ ಶಿವಯೋಗಿ). ನಿಜವಾದ ಧರ್ಮದ ತಿರುಳು ಇರುವುದು ನಮ್ಮೆಲ್ಲರಲ್ಲಿ ತೋರಿಬರುವ ನಡತೆಯಲ್ಲಿ. ಸತ್ಯ, ಅಹಿಂಸೆ, ಹಾಗೂ ಸ್ವಾರ್ಥ ತ್ಯಜಿಸಿದ ಲೋಕಹಿತದ ಆಚರಣೆಯಲ್ಲಿ. ಇವುಗಳನ್ನು ಅನುಸರಿಸಿದಾಗ ಮಾತ್ರ ನಾವು ಈ ಸಮಾಜದಲ್ಲಿ ಎಲ್ಲ ಜೀವಿಗಳೊಂದಿಗೆ ಘನತೆಯಿಂದ ಬಾಳುವ ವಿವೇಕವಂತ ಸದಸ್ಯರಲ್ಲಿ ಒಬ್ಬರಾಗುತ್ತೇವೆ. ಇದರಿಂದ ಸಮಾಜದಲ್ಲಿ ಜೀವಿಸುವ ಪ್ರತಿಯೊಬ್ಬ ವ್ಯಕ್ತಿಯ ಉನ್ನತ ಬಯಕೆಗಳು ಈಡೇರುತ್ತವೆ.

ಭಾರತದ ಸಿದ್ಧ ಮತ್ತು ಶ್ರಮಣಧಾರೆಗಳು ಆಡಂಬರದ ಭಕ್ತಿಯ ವಿಲಾಸವನ್ನು ನಿರಾಕರಿಸುತ್ತವೆ. ಅನುಭಾವಿ ಪಂಥಗಳಲ್ಲಿ ಆಧ್ಯಾತ್ಮಿಕತೆಯ ಹೆಸರಿನಲ್ಲಿ ನಡೆಯುವ ಡೌಲು ದವಲತ್ತಿನ ಪ್ರದರ್ಶನವನ್ನು ನೈತಿಕ ಸ್ವಚ್ಛತೆ, ಅರಿವು ಎನ್ನುವುದು ಬಹಿರಂಗದಲ್ಲಿ ನಡೆಸುವ ಪ್ರದರ್ಶನಾತ್ಮಕ ಕ್ರಿಯೆಗಳಲ್ಲ, ಇವೆಲ್ಲವೂ ಅಂತರಂಗದಲ್ಲಿ ನೆಲೆಸಿರಬೇಕಾದ ನಿಧಿ. ಅಂತಿಮವಾಗಿ ಈ ನಿಧಿ ಬಹಿರಂಗದ ನಡವಳಿಕೆಗಳಲ್ಲಿ ಕಾಣಿಸಿಕೊಳ್ಳಬೇಕಾದ ಕ್ರಿಯಾ ಜ್ಞಾನ ಎಂದು ತತ್ತ್ವಸಾಧಕರು ಹೇಳುತ್ತಾರೆ. ಇದನ್ನೇ 'ಅನುಭಾವವೆಂಬುದು ಅಂತರಂಗದ ರತ್ನ' ಎಂದರು ಅನುಭಾವಿಗಳು.

'ನೀರೆಲ್ಲವೂ ತೀರ್ಥ' ಎಂದು ತಿಳಿದಾಗ ಮಾತ್ರ ನಾವು ಕುಡಿಯುವ ನಮ್ಮೂರಿನ ಬಾವಿಯ ನೀರೂ ಗಂಗೆ, ಯಮುನಾ ನದಿಗಳಷ್ಟೇ ಪವಿತ್ರವಾಗುತ್ತದೆ. ನೀರನ್ನು ಮತ್ತು ನೀರಿನ ಮೂಲಗಳನ್ನು ಮಲಿನಗೊಳಿಸುವುದು ಭೂಮಿಯ ಮೇಲಿನ ಜೀವಿಗಳಿಗೆ ವಿಷವುಣಿಸಿದಂತೆ ಎಂಬುದನ್ನು ಸಮಾಜ ಮೊದಲು ತಿಳಿಯಬೇಕಿದೆ.

ಅಧಿಕಾರ, ಹಿಂಸೆ ಮತ್ತು ಮೌಢ್ಯದಿಂದ ಕಂಗೆಟ್ಟಿರುವ ನಮ್ಮ ಸಮಾಜದಲ್ಲಿ ಸರ್ವ ಜನಾಂಗದವರೂ ಗೌರವಯುತ ಬಾಳುವೆಯನ್ನು ಬಾಳಲು ಅತಿರೇಕವಿಲ್ಲದ ನಿಸರ್ಗ ವಿವೇಕ ಅಗತ್ಯ, ಸೃಷ್ಟಿಯಲ್ಲಿ 'ಯಾವುದೂ ಶ್ರೇಷ್ಠವಲ್ಲ, ಯಾವುದೂ ಕನಿಷ್ಠವಲ್ಲ' ಎಂಬುದನ್ನು ಲೋಕಕ್ಕೆ ತಿಳಿಸಿಕೊಡುತ್ತದೆ. ಇಂಥ ಉದಾತ್ತ ಚಿಂತನೆಗಳು ಮಾತ್ರ ವ್ಯಕ್ತಿ ಮತ್ತು ಸಮಾಜವನ್ನು ಒಗ್ಗೂಡಿಸುತ್ತವೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಸದ್ಗುಣ ಮತ್ತು ದುರ್ಗುಣಗಳ ವ್ಯತ್ಯಾಸ ತಿಳಿಯದಾದಾಗ ನಮ್ಮ ಬೆಳವಣಿಗೆ ನಿಲ್ಲುತ್ತದೆ.
  —ಮಹಾತ್ಮ ಗಾಂಧಿ
- ಕೆಲವು ಸಲ ಸಣ್ಣಪುಟ್ಟ ಉಪಕಾರಗಳೂ ಒಳ್ಳೆಯ ನಡವಳಿಕೆಯನ್ನು ಮೂಡಿಸುತ್ತವೆ.
  —ಎಮರ್ಸನ್
- ಜಗತ್ತಿನ ಅತಿದೊಡ್ಡ ಪ್ರಾರ್ಥನೆ ಎಂದರೆ ತಾಳ್ಮೆ.
  —ಗೌತಮ ಬುದ್ಧ
- ಶಿಕ್ಷೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಮಾತ್ರ ಒಳ್ಳೆಯವರಾಗಿ ಕಾಣಿಸಿಕೊಂಡರೆ ಸಾಲದು. ಅದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಬೇಕು.
  —ಅಲ್ಬರ್ಟ್ ಐನ್‌ಸ್ಟೀನ್
- ಹಣ ಎಂಬುದು ಉಪ್ಪಿನಂತೆ. ಕಡಿಮೆ ತಿಂದರೆ ರುಚಿ, ಹೆಚ್ಚು ತಿಂದರೆ ದಾಹ.
  —ಶಿವರಾಮ ಕಾರಂತ
- ಹೆಜ್ಜೆಗೊಂದು ಹೊಸ ಯುಗಾದಿ.
  —ಕೆ.ಎಸ್. ನಿಸಾರ ಅಹಮದ್
- ನಮ್ಮ ಅಂತರಂಗದ ಪುಸ್ತಕವನ್ನು ತೆರೆಯುವ ತನಕ ಉಳಿದೆಲ್ಲ ಪುಸ್ತಕಗಳು ನಿಷ್ಪ್ರಯೋಜಕ.
  —ಸ್ವಾಮಿ ವಿವೇಕಾನಂದ
- ಬೇರೊಬ್ಬರನ್ನು ಅಪಹಾಸ್ಯ ಮಾಡುವುದರ ಅರ್ಥ ಮತ್ತೊಬ್ಬ ಶತ್ರುವಿಗೆ ಜನ್ಮಕೊಟ್ಟಂತೆ.
  —ಅ.ನ. ಕೃಷ್ಣರಾಯ
- ಯುಗಯುಗಾದಿ ತೆರೆಗಳೇಳುತಿವೆ, ಬೀಳುತಿವೆ ಹೊಸಹೊಸವು ಪ್ರತಿವರುಷವು. ಒಳಗೆ ಅದೋ ಕಾಣುತಿದೆ
  —ಗೋಪಾಲ ಕೃಷ್ಣ ಅಡಿಗ